IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed ( Group -I) Journal Volume 10, Iss 3, 2021

# ಕನ್ನಡ ಜನಪದ ಸಾಹಿತ್ಯ: ಕಥನ ವಿಚಾರಗಳು

**ಡಾ. ಸಣ್ಣಹನುಮಪ್ಪ ಜಿ.**

**ಸಹ ಪ್ರಾಧ್ಯಾಪಕರು ಕನ್ನಡ ವಿಭಾಗ**

**ಶ್ರೀಮತಿ ಇಂದಿರಾ ಗಾಂಧಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸಾಗರ–೫೭೭೪೦೧**

ಕನ್ನಡ ಜನಪದ ಸಾಹಿತ್ಯ ಎಂದರೆ ಜನಪದ ಸಂಕಥನವೇ ಆಗಿದೆ. ಕಥನವೆಂದರೆ, ಒಂದು ನಿರ್ದಿಷ್ಟ ಘಟನೆಯೊಂದರ ಸುತ್ತ ಅನಕ್ಷರಸ್ಥ ಜನಪದ ಮನಸ್ಸುಗಳು ತೀವ್ರವಾಗಿ ಅನುಭವಿಸಿ ಕಟ್ಟಿದ ಸಾಹಿತ್ಯ ಪ್ರಕಾರ. ಜನಪದ ಸಾಹಿತ್ಯ ಜನಪದ ಬದುಕಿನಷ್ಟೆ ಸಹಜವಾದುದು. ಅದು ಸರಳವೂ ಮತ್ತು ಸುಲಭವಾಗಿ ಅರ್ಥವಾಗುವಂಥದ್ದು. ಶಿಷ್ಟ ಸಾಹಿತ್ಯದಂತೆ ತೀವ್ರ ಸಾಹಿತ್ಯಕ ಪರಿಣಾಮಗಳನ್ನುಂಟು ಮಾಡುವ ಉದ್ದೇಶ ಜನಪದದ ಯಾವ ಸಾಹಿತ್ಯ ಪ್ರಕಾರಕ್ಕೂ ಇರುವುದಿಲ್ಲ. ಮೂಲತಃ ಮೌಖಿಕ ಕಲೆಯಾದ ಜಾನಪದವು ಅನಕ್ಷರಸ್ಥ ಸಮಾಜದ ಬದುಕಿನ ಉತ್ಪನ್ನ. ಸಾಮಾನ್ಯವಾಗಿ ದುಡಿಯುವ ವರ್ಗಕ್ಕೆ ಸೇರಿದ ಈ ಸಮಾಜಗಳ ಜೀವನ ವಿನ್ಯಾಸವು ನಿಸರ್ಗ ನಿಯಮಕ್ಕೆ ತೀರ ಹತ್ತಿರವಾಗಿರುತ್ತವೆ. ಪರಿಸರ ಸ್ನೇಹಿ ಬದುಕಿನ ವ್ಯಾಪಾರದ ವ್ಯಾಕರಣವೇ ಜನಪದರ ಬದುಕಿನ ತತ್ತ್ವವಾಗಿರುತ್ತದೆ. ಹೀಗಾಗಿ ಜನಪದ ಸಾಹಿತ್ಯವೆಂದರೆ ಅವರ ಬದುಕಿನಿಂದ ಪ್ರತ್ಯೇಕಿಸಿ ಶುದ್ಧ ಕಲೆಯಂತೆ ಪರಿಭಾವಿಸುವುದು ಸಾಧ್ಯವೇ ಇಲ್ಲ.

ಈ ನೆಲೆಯಲ್ಲಿ ಜನಪದ ಕಥನಗೀತೆಗಳು ಜನಪದರ ಆತ್ಮಕಥನಗಳೇ ಆಗಿವೆ. ಒಂದು ಮಹತ್ವದ ಘಟನೆಯ ಸುತ್ತ ತೀವ್ರ ಭಾವುಕತೆಯಲ್ಲಿ ಪುರಾಣದಂತೆ ರಚನೆಗೊಳ್ಳುವ ಇವು ಜನಮಾನಸದಲ್ಲಿ ಧಾರ್ಮಿಕ ಸ್ವರೂಪ ಪಡೆದುಕೊಂಡು ದಿವ್ಯ ವಿಶ್ವಾಸವನ್ನು ಮೂಡಿಸುತ್ತವೆ. ಯಾಕೆಂದರೆ "ಕಥನಗೀತೆಯ ವಸ್ತು ಚಾರಿತ್ರಿಕ ಸಂದರ್ಭವೊಂದರ ಘಟನೆಯೇ ಆಗಿರುತ್ತದೆ."[೧] ಕಾಲಬದ್ಧವಾಗಿ ನಡೆದ ಮಹತ್ವದ ಒಂದು ಸಂಗತಿ ಜನಪದರಿಗೆ ಇತಿಹಾಸವೇ ಆಗಿಬಿಡುವುದು ಕಥನಗೀತೆಗಳ ವೈಶಿಷ್ಟ್ಯ. ಹಾಗೆಯೇ ತಲೆಮಾರುಗಳಿಂದ ವರ್ಗಾಯಿಸಲ್ಪಟ್ಟ ಇಂಥ ಕಥಾನಕಗಳು ಬಾಯ್ದೆರೆಯಲ್ಲಿ ಹಾದು ಬರುವಾಗ ಅನೇಕ ಸಮಕಾಲೀನ ಸಂಗತಿಗಳನ್ನು ಅಂದರೆ ಧರ್ಮ, ರಾಜಕೀಯ, ಅಧಿಕಾರ, ನೀತಿ, ತರ್ಕಗಳಂಥ ಹಲವಾರು ವಿಷಯಗಳನ್ನು ತನ್ನೊಡಲಿಗೆ ಸೇರಿಸಿಕೊಂಡು ಹುರಿಗಟ್ಟುತ್ತಾ ಸಾಗಿ ಬರುವುದು ಜನಪದದ ಜಾಯಮಾನ.

ಒಂದು ಕಾಲಮಾನದಲ್ಲಿ ಹುಟ್ಟಿ ಕಾಲದ ಗುರುತುಗಳನ್ನು ಮೀರಿ ಕಾಲಾತೀತ ಗುಣವಿಶೇಷಗಳೊಂದಿಗೆ ಸಮೂಹದ ಪ್ರಜ್ಞೆಯಲ್ಲಿ ಗಟ್ಟಿಯಾಗಿ ಕೂತುಬಿಡುವುದು ಇದರ ಪ್ರಧಾನ ಲಕ್ಷಣ.


IJFANS International Journal of Food And Nutritional Sciences

ಜನಪದ ಕಥನಗೀತೆಗಳನ್ನು ಹಾಡುವ ಸಂದರ್ಭಗಳೂ ಕೂಡ ನಿರ್ದಿಷ್ಟವಾಗಿ ಗೊತ್ತಾದ ಸ್ಥಳ ಮತ್ತು ಸಂದರ್ಭವೇ ಆಗಿರುತ್ತವೆ. ವಕ್ತೃ ಸಂದು ಸಂದುಗಳಿಗೆ ತಾವು ಹಾಡುವುದನ್ನು ನಿಲ್ಲಿಸಿ, ಹಣ್ಣು–ಕಾಯಿ, ದೀಪ–ಧೂಪಗಳಿಂದ ಪೂಜಿಸುತ್ತಾ ಪದಗಳನ್ನು ಮುಂದುವರೆಸುವ ಸಂಪ್ರದಾಯ ಸತೀಪದ್ಧತಿಯ ಮತ್ತು ಕೆರೆ–ಕಟ್ಟೆ, ಕೋಟೆಗಳಿಗೆ ಬಲಿದಾನ ಮಾಡಿದ ಕಥಾನಕಗಳ ಹಾಡಿನ ಸಂದರ್ಭಗಳಲ್ಲಿದೆ. ಹೀಗೆ ಭಕ್ತಿ–ಭಾವಗಳಿಂದ ಅಸಮಾನ್ಯ ಘಟನೆಯಲ್ಲಿ ಲೋಕೋತ್ತರವಾದ ದೈವೀ ಭಾವನೆಯನ್ನು ಜನರಲ್ಲಿ ಮೂಡಿಸುತ್ತವೆ. ಉತ್ತರದೇವಿ, ಭಾಗೀರಥಿ, ನಾಗಮ್ಮ, ಹೊನ್ನಮ್ಮ ಮತ್ತು ಕಿತ್ತೂರುರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣನಂಥ ಕಥನಗೀತೆಗಳು ಈ ದೃಷ್ಟಿಯಿಂದ ಇಲ್ಲಿ ಮಹತ್ವದ್ದೆನಿಸುತ್ತವೆ.

ಅನಾಮಧೇಯನಾಗುಳಿದ ವಕ್ತೃವಿನ ಹಾಡು ಸಮೂಹದ ಸ್ವತ್ತಾಗಿ ಪುನರ್‌ಸೃಷ್ಟಿಗೊಳ್ಳುತ್ತಾ ಸಾಗುವ ಪ್ರಕ್ರಿಯೆ ಇಲ್ಲಿಯೂ ನಡೆಯುತ್ತದೆ. ಈ ಮೂಲಕ ಆಯಾ ಕಲಾವಿದನ ಕಲ್ಪನೆಯಲ್ಲಿ, ವರ್ಣನೆಯಲ್ಲಿ, ಕಾಲ, ಸ್ಥಳ, ಪರಿಸರಗಳ ಪ್ರಭಾವಗಳನ್ನು ಅತ್ಯಂತ ಸಹಜವಾಗಿ ಪಡೆದುಕೊಂಡು ಮರುಹುಟ್ಟು ಪಡೆಯುತ್ತಾ ನಾವೀನ್ಯಗೊಳ್ಳುತ್ತದೆ. ಆದರೆ ಕಥಾಭಿತ್ತಿಯಲ್ಲಿ ಘಟನೆ, ಪಾತ್ರ ಮತ್ತು ಮೂಲಾಶಯಗಳು ಬದಲಾಗದೆ ಉಳಿದು ಬರುತ್ತವೆ. ಜನಪದ ರಚನೆಗಳಲ್ಲಿ ಬುದ್ಧಿಗಿಂತ ಭಾವನೆಗಳಿಗೆ ಹೆಚ್ಚು ಒತ್ತುಕೊಡಲಾಗಿರುತ್ತದೆ. ಯಾಕೆಂದರೆ ಮುಗ್ಧ ಜನಪದ ಲೋಕ ವ್ಯವಹಾರಿಕ, ಲಾಭ–ನಷ್ಟಗಳನ್ನು ಎಂದಿಗೂ ಲೆಕ್ಕಹಾಕುವುದಿಲ್ಲ. ಅವರು ಸಂಬಂಧಕ್ಕೆ ಮತ್ತು ಸಹಬಾಳ್ವೆಗೆ ತೀವ್ರವಾಗಿ ಸ್ಪಂದಿಸುತ್ತಾರೆ.

ಮದಗದ ಕೆಂಚವ್ವ, ಭಾಗೀರಥಿ, ಕೆರೆಹೊನ್ನಮ್ಮ, ಗಂಗೆಗೌರಿ ಜಗಳದಂತಹ ಕಥನಗೀತೆಗಳನ್ನು ಅವರು ಕೇಳಿಸಿಕೊಳ್ಳುವಾಗ ತೋರುವ ಪ್ರತಿಕ್ರಿಯೆ ಗಮನಾರ್ಹವಾದುದು. ಕೇಳುಗವರ್ಗ ಅತ್ಯಂತ ಭಾವುಕವಾಗಿಯೂ ಮತ್ತು ಶ್ರದ್ಧೆ, ಭಕ್ತಿ ಹಾಗೂ ಗೌರವಗಳಿಂದ ಇಡೀ ರಾತ್ರಿ ಕೇಳಿಸಿಕೊಳ್ಳುತ್ತಾರೆ. ಕೆಲವರು ಕಣ್ಣೀರು ಹಾಕುವುದು ಕೂಡ ಸಾಮಾನ್ಯ ಸಂಗತಿಯೇ ಆಗಿದೆ.

ನಿರೂಪಕರು ಕೇಳುಗವರ್ಗವನ್ನು ಅವಲಂಬಿಸಿ ತನ್ನ ವರ್ಣನೆಯ ವಿವರಗಳನ್ನು ಲಂಬಿಸುವ ಇಲ್ಲವೆ ಮೊಟಕಾಗಿಸುವ ಸಂದರ್ಭಗಳೂ ಇಲ್ಲದಿಲ್ಲ. ಇನ್ನೂ ಎಷ್ಟೊ ಸಲ ನಿರೂಪಕನ ಲೋಕಜ್ಞಾನ, ತಿಳಿವಳಿಕೆ ಮತ್ತು ಅರ್ಹತೆಗಳನ್ನು ಅವಲಂಬಿಸಿಯೂ ಕಿರಿದು ಅಥವಾ ಹಿರಿದಾಗಿಸುವುದೂ ಇರುತ್ತದೆ. ಅಂದರೆ ಕಥಾನಕವನ್ನು ಅಲ್ಲಿ ನೆರೆದ ಸ್ತ್ರೀ–ಪುರುಷರ ಸಂಖ್ಯೆ ಹಾಗೂ ಸಮಾಜದಲ್ಲಿ ಅವರಿಗಿರುವ ಸ್ಥಾನಮಾನಗಳು ಏನೆಂಬುದನ್ನೂ ಕೂಡ ಅವಲಂಬಿಸಿ ಹಾಡುಗಾರನ ನಿರೂಪಣೆಯು ನಿರ್ಧಾರವಾಗುವುದು ಸ್ವಾರಸ್ಯಕರ ಸಂಗತಿ.

ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed ( Group -I) Journal Volume 10, Iss 3, 2021

ಒಂದು ಕಥನಗೀತೆಯ ನಿರೂಪಣೆಯಲ್ಲಿ ಧರ್ಮ, ನೀತಿ, ತತ್ತ್ವ, ಇತಿಹಾಸ, ಕಲೆ, ವಸ್ತ್ರ, ಒಡವೆ, ಮಳೆ, ಬೆಳೆ, ಆಹಾರ ನೈವೇದ್ಯ ಮುಂತಾದ ಎಲ್ಲ ಬಗೆಯ ಸಂಪ್ರದಾಯ ಮತ್ತು ಆಚರಣೆಗಳು ಮುಪ್ಪುರಿಗೊಂಡು ಅವರ ಪರಂಪರಾಗತ ಜೀವನ ವಿಧಾನಗಳು ಅಭಿವ್ಯಕ್ತಿಗೊಳ್ಳುತ್ತವೆ. ಸಮಕಾಲೀನ ಜೀವನ ಮೌಲ್ಯಗಳು ಸಹಜವಾಗಿಯೇ ಪುನರಭಿವ್ಯಕ್ತಿಯಲ್ಲಿ ಸೇರಿ ಹೋಗುತ್ತವೆ. ಮೌಖಿಕ ಪರಂಪರೆಯ ಹತ್ತಾರು ಸಮಾಜಗಳು ಒಂದು ಗ್ರಾಮ ಅಥವಾ ಹಳ್ಳಿಯಲ್ಲಿ ಒಟ್ಟಾಗಿಯೇ ಬದುಕುತ್ತವೆ. ಹೀಗಾಗಿ ಸಹಬಾಳ್ವೆಯ ಮತ್ತು ವೈರುಧ್ಯದ ಸಂಗತಿಗಳೂ ಕೂಡ ಇಲ್ಲಿ ದಾಖಲಿಸಲ್ಪಡುತ್ತವೆ.

ಜನಪದರು ತಾವು ನಿರೂಪಿಸುವ ಸಾಹಿತ್ಯದ ರೂಪಗಳ ಬಗೆಗೆ ತಲೆಕೆಡಿಸಿಕೊಳ್ಳುವುದಿಲ್ಲ ಅಥವಾ ಆ ಬಗೆಗಿನ ತಿಳಿವಳಿಕೆಯ ಅಗತ್ಯ ಕೂಡ ಅವರಿಗೆ ಕಂಡು ಬರುವುದಿಲ್ಲ. ಗದ್ಯ–ಪದ್ಯ ರೂಪಗಳೆರಡಕ್ಕೂ ಕತೆ ಹೇಳುವುದು ಅಥವಾ ಕತೆ ಮಾಡುವುದು ಎಂದೇ ಕರೆಯುತ್ತಾರೆ. ಕಥನಗೀತೆಗಳಿಗಂತೂ 'ಮದಗದ ಕೆಂಚವ್ವನ ಕತೆ', 'ಈರೋಬಿಕತೆ', 'ಉತ್ತರದೇವಿ ಕತೆ' ಎಂದೇ ಹೇಳುತ್ತಾರೆ. ಅಥವಾ 'ಪದ' ಎಂದೂ ಕರೆಯುವುದಿದೆ. ಅಂತಿಮವಾಗಿ ಜನಪದರು ಅದು ಪದ್ಯವಿರಲಿ, ಗದ್ಯವಿರಲಿ ಅಥವಾ ಆ ಎರಡೂ ರೂಪಗಳಲ್ಲಿರುವ ಪಠ್ಯಗಳನ್ನಾದರೂ ಅಖಂಡವಾಗಿಯೇ ಗ್ರಹಿಸುತ್ತಾರೆ. ಅದಕ್ಕೆ ಮುಖ್ಯ ಕಾರಣವೆಂದರೆ ಅವರು ಬದುಕನ್ನು ನೋಡುವ ದೃಷ್ಟಿಕೋನ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ... ಮುಂತಾಗಿ ವಿಭಾಗಿಸಿ ಸೀಳಿ ನೋಡುವ ದೃಷ್ಟಿ ಜನಪದರಲ್ಲಿ ಇಲ್ಲ. ಇಡಿಯಾಗಿಯೇ ಪಠ್ಯವನ್ನು ಗ್ರಹಿಸುವ ದೃಷ್ಟಿಕೋನ ಬಂದಿರುವುದು ಅವರು ಜೀವನವನ್ನು ಪರಿಭಾವಿಸಿದ ರೀತಿಯೇ ಆಗಿದೆ. ಹೀಗಾಗಿ ಕಥನಗೀತೆಗಳನ್ನು ಸಾಂದರ್ಭಿಕವಾಗಿ ಗದ್ಯ ಮತ್ತು ಪದ್ಯಗಳೆರಡರಲ್ಲೂ ಸಮರ್ಥವಾಗಿ ನಿರೂಪಿಸುವ ಕೌಶಲ ಅವರಿಗಿದೆ. ವಿಶೇಷವೆಂದರೆ ಕೇಳುಗ ವರ್ಗ ಕೂಡ ಅಖಂಡವಾಗಿಯೆ ಗ್ರಹಿಸಿಕೊಳ್ಳುತ್ತದೆ. ಇಲ್ಲಿನ ಗದ್ಯ–ಪದ್ಯಗಳಿಗೆ ಕಾವ್ಯದ ಪರಿಣಾಮದಲ್ಲಿ ಯಾವ ವ್ಯತ್ಯಾಸಗಳೂ ಇಲ್ಲದಂತೆ ಪರಿಭಾವಿಸುವುದು ವಿಶೇಷ.

ಈ ಹಿನ್ನೆಲೆಯಲ್ಲಿ ಕಥನಗೀತೆಗಳನ್ನು ಜೀ.ಶಂ. ಪರಮಶಿವಯ್ಯನವರು 'ಹಾಡ್ಗತೆ'[೨]ಗಳೆಂದು ಹೆಸರಿಸಿರುವುದನ್ನು ಗಮನಿಸಬೇಕು. ಕಂಸಾಳೆಯವರು, ಜುಂಜಪ್ಪನ ಹಾಡುಗಾರರು, ಗೊರವರು, ನೀಲಗಾರರು, ಕಿನ್ನರಿಜೋಗಿಗಳು... ಮುಂತಾದ ಧಾರ್ಮಿಕ ಮತ್ತು ಲೌಕಿಕ ವೃತ್ತಿಗಾಯಕ ಪರಂಪರೆಯವರೂ ಕೂಡ ಗದ್ಯ–ಪದ್ಯಗಳೆರಡರಲ್ಲೂ ಹಾಡು ಮತ್ತು ಪ್ರದರ್ಶನ ನೀಡುತ್ತಾರೆ. ಇಂತಹ ಪ್ರಭಾವಿ ಕಾವ್ಯ ಪ್ರಕಾರಗಳ ವರ್ಣಕ ಪರಂಪರೆ ಕರ್ನಾಟಕದಾದ್ಯಂತ ಪಸರಿಸಿರುವುದು ಹೊಸ ಸಂಗತಿಯೇನಲ್ಲ.

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed ( Group -I) Journal Volume 10, Iss 3, 2021

ಪ್ರತಿಭಾವಂತ ಜನಪದ ವಕ್ತೃವಿಗೆ ಅನುಭವ ಸಾಂದ್ರತೆ ಗಾಢವಾಗಿದ್ದಾಗ ತಾನು ನಿರೂಪಿಸುತ್ತಿರುವ ವಸ್ತು, ಪಾತ್ರ, ಘಟನೆ, ಕ್ರಿಯೆ ಹಾಗೂ ಸಂಗೀತಗಳನ್ನು ಅರ್ಥಪೂರ್ಣವಾಗಿ ಮುಪ್ಪುರಿಗೊಳಿಸಿ ಹೇಳುತ್ತಾನೆ. ಇಂತಹ ಕ್ರಮಗಳನ್ನು ಎರಡು ರೀತಿಯಿಂದ ಗುರುತಿಸಬಹುದು.

"೧) ಕಥನಗೀತೆಯನ್ನು ಪರಿಕಲ್ಪಿಸಿಕೊಳ್ಳುವ ಕಥೆಗಾರ

೨) ಕಥನಗೀತೆಯನ್ನು ಒಂದು ಮಾದರಿಯಾಗಿ ಗ್ರಹಿಸಿ ಒಪ್ಪಿಕೊಳ್ಳುವ ಜನಪದ ಜನ.

ಇವರಿಬ್ಬರಿಗೂ ಕಥನಗೀತೆಯೊಂದು ಸಿದ್ಧ ಮಾದರಿ. ಅದಕ್ಕೆ ಅವರು ಪಾರಂಪರಿಕವಾಗಿ ಬದ್ಧರಾಗಿದ್ದಾರೆ. ಅದು ಅವರಿಗೆ ಸಾಮಗ್ರಿಯೂ ಹೌದು ಪರಿಕಲ್ಪನೆಯೂ ಹೌದು."[೩] ಆದ್ದರಿಂದ ಜನಪದ ಹಾಡುಗಾರ/ತಿ ತನ್ನ ಬುದ್ಧಿ ಮತ್ತು ಭಾವಗಳೆರಡನ್ನೂ ಸಂಲಗ್ನಗೊಳಿಸಿ ಕಥನಕಾವ್ಯವನ್ನು ಹೆಚ್ಚು ಆಕರ್ಷಣೀಯವೂ, ಪರಿಣಾಮಕಾರಿಯೂ ಆಗಿ ನಿರೂಪಿಸುತ್ತಾನೆ. "ಕಥನಗೀತೆಗಳ ನಿರೂಪಣೆಗೆ ಇರುವ ಸಾಂಗತ್ಯಗಳೇ ಬೇರೆ. ಡಪ್ಪು, ತಾಳ, ತುಂತುಣಿ, ಚೌಡಿಕೆ, ಚಂಮಹಲಗೆ, ಗುಮಟೆ, ಡೊಳ್ಳುಗಣಿ, ದಮ್ಮಡಿ, ಏಕತಾರಿ ಮೊದಲಾದ ವಾದ್ಯಗಳು ಒಳ್ಳೆಯ ಕಂಠವಿರುವ, ವಸ್ತುಪಾತ್ರಗಳ ಭಣಿಭಾವಗಳಿಗೆ ಅನುಗುಣವಾದ ವಿವಿಧ ಲಯ ಗತ್ತುಗಳನ್ನು ರೂಪಿಸಿಕೊಂಡು ಹಾಡಬಲ್ಲ ಗಾಯಕ– ಅವನೇ ಕವಿಯೂ ಆಗಿರಬಹುದು– ಆ ಬಳಿಕ ಒಂದು ವಿಶೇಷ ಸಂದರ್ಭ, ಬಗೆಬಗೆಯ ಶ್ರೋತೃವೃಂದ – ಶ್ರೋತೃವೃಂದದ ಗೊಂದಲವನ್ನೂ ಕರಗಿಸಿ ಅವರ ಹೃದಯವನ್ನು ಮಿಡಿದು ಸೆರೆ ಹಿಡಿಯುವ ಧಾಟಿ, ಚ್ಯಾಲ, ಏರು, ಇಳುವು ಹೀಗೆ ಕಥನಗೀತೆಗಳದು ಒಂದು ಗರ್ದಿ ಮೇಳ. ಅಲ್ಲದೆ ಕಥನಗೀತೆಗಳ ವಸ್ತುವಿನಲ್ಲೂ ಅಪಾರ ವ್ಯಾಪ್ತಿ, ಪುರಾಣ, ಚರಿತ್ರೆ, ಸಾಮಾಜಿಕ ಘಟನೆಗಳು, ಕಥನಗೀತೆಗಳಲ್ಲಿ ವಿವಿಧ ಬಗೆಯ ಛಂದಸ್ಸನ್ನು, ಸಹಜ ಲಯದ ಸೊಗಡನ್ನು ಬಳಸಿಕೊಂಡು ನಿರೂಪಣೆಗೆ ಒಂದು ಕಲಾತ್ಮಕ ಆವರಣವನ್ನೇ ನಿರ್ಮಿಸುತ್ತವೆ. ಆದುದರಿಂದ ಜನಪದ ಕಥನಗೀತೆಗಳು ವಸ್ತು ಶೈಲಿ, ನಿರೂಪಣೆ, ಧಾಟಿ, ಲಯ, ಗತ್ತು, ಗೇಯತೆ, ಅದ್ಭುತಪವಾಡ, ವೀರಾವೇಶ ಮುಂತಾದ ದೇಸೀಯ ರೂಪಗಳಿಂದ ಒಡಗೂಡಿದ ರೋಮಾಂಚಕ ಉನ್ನತ ರಮ್ಯ ಕಲ್ಪನೆಗಳ ಒಂದು ಪ್ರತಿಭಾ ಸಂಯೋಜಿತ ಕಲಾಸೃಷ್ಟಿ. ಕಥನಗೀತೆಗಳಿಗೆ ಒಂದು ಹಂತದಲ್ಲಿ ಅಭಿನಯಾದಿಗಳು ಸೇರಿ ಕೃತ್ಯ, ಬಯಲಾಟಗಳಿಗೆ ಪ್ರೇರಕವಾಗಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ."[೪] ಹೀಗಾಗಿ ಹಾಡುಗ ಮತ್ತು ಕೇಳುಗ ಒಟ್ಟಿಗೆ ಸೇರಿಕೊಂಡೆ ಕಥನಗೀತೆಗಳು ಒಂದು ಅಖಂಡ ಪಠ್ಯವಾಗಿ ಗೃಹೀತಗೊಳ್ಳುತ್ತವೆ.



IJFANS International Journal of Food And Nutritional Sciences
Official Publication of International Association of Food and Nutrition Scientists

ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed ( Group -I) Journal Volume 10, Iss 3, 2021

"ಇಲ್ಲಿ ಜನಪದ ಒಂದು ಸೃಷ್ಟಿಯ ಮನಸ್ಸು ಆಗುತ್ತದೆ. ಕಾರಣವಾಗಿ ಏಕಕಾಲದಲ್ಲಿ ಕಥನಗೀತೆಯ ಮಾದರಿಯೊಂದನ್ನು ಕಥೆಗಾರ ಮತ್ತು ಪ್ರೇಕ್ಷಕ ಅದನ್ನು ಕಥನಗೀತೆಯನ್ನಲ್ಲದೆ ಬೇರೆಯಾಗಿ ಗ್ರಹಿಸಲಾರರು. ಆದ್ದರಿಂದ ಪರಂಪರೆಯ ಕಥೆಗಾರ ಮತ್ತು ಕೇಳುಗ ಕಥನಗೀತೆಯೊಂದನ್ನು 'ಕಥನಗೀತೆ'ಯಾಗಿಯೇ ಗ್ರಹಿಸಿದ್ದಾರೆ ಎಂದು ಹೇಳುವುದೆ ಕಥನಗೀತೆಯ ಬಗ್ಗೆ ನಾವು ಕೊಡಬೇಕಾದ ವಸ್ತುನಿಷ್ಠ ನಿರೂಪಣೆ"[೫] ಎನಿಸುತ್ತದೆ. ಅಲ್ಲದೆ ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಜಾತಿ, ಧರ್ಮ ಮತ್ತು ಲಿಂಗರಾಜಕಾರಣದಲ್ಲಿ ಅವೈದಿಕ ಆದಿಮ ಸಮಾಜಗಳ ದುರ್ವಿಧಿಗಳನ್ನು ನಿರ್ಮಿಸಿರುವ ಯಜಮಾನ್ಯ ವ್ಯವಸ್ಥೆಯ ಅನಾವರಣದ ಚಾರಿತ್ರಿಕ ಸಂದರ್ಭಗಳಾಗಿಯೂ ಕಥನಗೀತೆಗಳು ಮಹತ್ವದ ಪಾತ್ರವಹಿಸುತ್ತವೆ.

ಯಾಕೆಂದರೆ, "ಶಿಷ್ಟಪದ ಸಾಹಿತ್ಯ ಕ್ರಿಯೆಯಲ್ಲಿ ಪುರುಷರು, ಅದರಲ್ಲಿಯೂ ಬದ್ಧವ್ಯವಸ್ಥೆಯ ಪ್ರತಿಷ್ಠಿತರು ಮಾತ್ರ ಭಾಗವಹಿಸಿದರೆ, ಜಾನಪದ ಸಾಹಿತ್ಯ ಕ್ರಿಯೆಯಲ್ಲಿ ಗಂಡಸರು, ಹೆಂಗಸರು, ಮಕ್ಕಳು ಸಹಿತ ಎಲ್ಲರೂ ಮುಕ್ತವಾಗಿ ತೊಡಗಿಸಿಕೊಳ್ಳುತ್ತಾರೆ. ಹೀಗೆ ಹಿಂಡುಹಿಂಡಾಗಿ ತೊಡಗಿಸಿಕೊಳ್ಳುವ ಮೂಲಕ ಸಾಹಿತ್ಯ ಬದುಕಿನ ಒಂದು ಅವಶ್ಯಕ ಭಾಗ, ಅನಿವಾರ್ಯ ಸೃಷ್ಟಿ ಎಂಬುದನ್ನು ಇವರು ಸಾಬೀತುಗೊಳಿಸುತ್ತಾರೆ. ಸಾಹಿತ್ಯವೆನ್ನುವುದು ಕೇವಲ ಸೌಂದರ್ಯೋಪಾಸನೆಯ ಹವ್ಯಾಸವಲ್ಲ; ಬೌದ್ಧಿಕ ಚಟುವಟಿಕೆಯೂ ಅಲ್ಲ. ಸಾಮಾಜಿಕ ಕ್ರಿಯೆಯೆಂಬ ಮಾತು ಇಲ್ಲಿ ಅರ್ಥಪಡೆಯುತ್ತದೆ."[೬] ಕಂಠಸ್ಥ ಪರಂಪರೆಯ ಆದಿಮ ಸಮಾಜಗಳು ತಾವು ಜೀವಿಸುತ್ತಿದ್ದ ನೆಲದ ಗುಣವಿಶೇಷಗಳಿಂದ ಸಹಜವಾಗಿಯೇ ಪ್ರಭಾವಿತವಾಗಿರುತ್ತವೆ. ಸ್ಥಳೀಯ ಭೌಗೋಳಿಕ ವಿದ್ಯಮಾನಗಳಿಗನುಗುಣವಾದ ಕೃಷಿ, ಬೇಟೆ, ಪಶುಪಾಲನೆ, ಮನೆ, ಕುಟುಂಬ, ವಿವಾಹ, ದೈವ, ಕಾನೂನು ಮತ್ತು ಧರ್ಮ, ನೀತಿ, ತತ್ತ್ವಗಳು ಸೃಷ್ಟಿಗೊಂಡು ರೂಢಿಯಾಗಿ, ಸಂಪ್ರದಾಯಗಳಾಗಿ, ಪದ್ಧತಿಗಳಾಗಿ ಆಚರಣೆಗೆ ಬರುತ್ತವೆ. ಇವುಗಳೆಲ್ಲ ಅವರ ಹಾಡು–ಪಾಡುಗಳಲ್ಲಿ ಉತ್ಕೃಷ್ಟವಾಗಿ ಅಂತಸ್ಥಗೊಳ್ಳುವುದನ್ನು ಕಾಣುತ್ತೇವೆ.

"ಜಾನಪದ ಕಥನ ಕಾವ್ಯ ಬಹು ಸಂಕೀರ್ಣವಾದ, ವರ್ಗೀಕರಣಕ್ಕೆ ಸುಲಭವಾಗಿ ಸಗ್ಗದ, ವೈವಿಧ್ಯತೆಯ ವೈಭವದಿಂದ ಬೆರಗುಗೊಳಿಸುವ ಪ್ರಕಾರ. ಅರ್ಧ ಗಂಟೆಯಲ್ಲಿ ಹಾಡಬಹುದಾದ ಪದಗಳಿಂದ ಹಿಡಿದು ಇಡೀ ರಾತ್ರಿ, ಒಂದು ರಾತ್ರಿ ಏಕೆ ಅನೇಕ ರಾತ್ರಿಗಳ ತನಕ ಹಾಡುವಷ್ಟು ಪದಗಳು ಅದರ ಬಸಿರಲ್ಲಿ ಹುದುಗಿವೆ. ವಸ್ತು ವೈವಿಧ್ಯ ನೋಡಿದರೆ ಅವರದೇ ಒಂದು ವಿಶ್ವವಾಗುತ್ತದೆ. ಪುರಾಣ, ಇತಿಹಾಸ, ಯುದ್ಧ, ಸಾಹಸಕಾರ್ಯ, ದೇವಮಾನವಸಂಸಾರ, ಸಾಮಾಜಿಕಜೀವನ, ಅಮಾನುಷಘಟನೆಗಳು, ಸಾಧುಸಂತ ವೀರರ ಜೀವನ, ವಿನೋದ ಸಂಗತಿಗಳು; ಐತಿಹ್ಯ, ದಂತಕಥೆ, ತತ್ವವಿಚಾರ, ನೀತಿ ಸ್ವಾತಂತ್ರ್ಯ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 3, 2021

ಚಳುವಳಿ, ದೇಶಾಭಿಮಾನಿಗಳ ತ್ಯಾಗ, ಪ್ರಾಣಿಕಥೆ, ಹೀಗೆ ಒಂದೇ, ಎರಡೇ ಸರ್ವಜಗದ್ವಸ್ತುಗಳು ಹಾಗೂ ವ್ಯಾಪಾರಗಳು ಅದಕ್ಕೆ ಗ್ರಾಸವಾಗುತ್ತವೆ."[೭] ಹಾಗೆಯೇ ಬಹುತ್ವ ಸಮಾಜಗಳ ಸಂಕೀರ್ಣ ವ್ಯವಸ್ಥೆಯಲ್ಲಿ ಏರ್ಪಟ್ಟ ಸಂಘರ್ಷಗಳು, ನಡೆದ ತಿಕ್ಕಾಟಗಳು ಘಟಿಸಿದ ದೌರ್ಜನ್ಯಗಳು, ಉಂಟಾದ ಪ್ರಲೋಭನೆಗಳು, ಆಕರ್ಷಣೆ ಮತ್ತು ವಿಕರ್ಷಣೆಗಳು ಹಾಗೂ ಪರಸ್ಪರ ಒಪ್ಪಿ ನಡೆದ ವಿನಿಮಯಗಳು ಮಾನವನ ನಿಡುಗಾಲದ ಜೀವಿತದ ಚರಿತ್ರೆಯಲ್ಲಿ ನಡೆದಿರುವುದು ಅತ್ಯಂತ ಸಹಜವಾದುದು. ಈ ಬಗೆಯ ಚಲನಶೀಲ ಸಮಾಜಗಳ ಪಯಣದಲ್ಲಿ ಸ್ವಕೀಯ ಮತ್ತು ಪರಕೀಯ ಬದುಕಿನ ಒಳ–ಹೊರಗುಗಳಲ್ಲಿ ಮಿಂದು ಬಂದ ಜನಪದ ಕಥನಕಾವ್ಯ ಸಾಮಗ್ರಿಗಳು ನಮ್ಮ ಮುಂದಿವೆ. ಅವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ದೇಶೀ ಪರಂಪರೆಯ ಜೀವಪರ ಆಶಯಗಳ ಮೂಲ ಸ್ವರೂಪಗಳನ್ನು ಮತ್ತು ಅವುಗಳ ಜೀವನಧರ್ಮಗಳನ್ನು ಪುನರ್‌ರಚಿಸಿಕೊಳ್ಳಲು ಸಾಧ್ಯವಾಗುತ್ತದೆ.

ಕನ್ನಡ ಜನಪದ ಕಥನ ಪರಂಪರೆಯಲ್ಲಿ ಕಾವ್ಯಾಭಿವ್ಯಕ್ತಿಯ ಸಾಹಿತ್ಯದ ವಿವಿಧ ರೂಪಗಳನ್ನು ಮತ್ತು ಅವುಗಳ ವರ್ಗೀಕರಣಗಳ ಕುರಿತಂತೆ ಬಹುಕಾಲದಿಂದ ಚರ್ಚೆ ಮತ್ತು ಸಂವಾದಗಳು ಬಹಳಷ್ಟು ನಡೆದಿವೆ.[*] ಇಲ್ಲಿ ಪುನಃ ಅದನ್ನು ಚರ್ವಿತ ಚರ್ವಣಮಾಡದೆ ಸ್ಥೂಲವಾಗಿ ಅವುಗಳ ರೂಪ–ಸ್ವರೂಪ ಮತ್ತು ಆಶಯ ಅಭಿವ್ಯಕ್ತಿಗಳಿಗನುಗುಣವಾಗಿ ಈ ಕೆಳಗಿನಂತೆ ತೋರಿಸಬಹುದು.

**ಜನಪದ ಕಥನಕಾವ್ಯ**

- ಜನಪದ ಗೀತೆ
  - ಕಥನಗೀತೆ
  - ನೀಳ್ಗವನ
  - ಖಂಡಕಾವ್ಯ
- ಜನಪದ ಲಾವಣಿ ಅಥವಾ ಬ್ಯಾಲೆಡ್
- ಜನಪದ ಮಹಾಕಾವ್ಯ ಅಥವಾ ಪುರಾಣ ಕಾವ್ಯ

ಈ ಬಗೆಯ ವರ್ಗೀಕರಣಗಳಾದರೂ ಶಿಷ್ಟಸಾಹಿತ್ಯದ ವಿವಿಧ ಪ್ರಕಾರಗಳನ್ನು ಗುರುತಿಸಿಕೊಂಡ ನಮ್ಮ ತಿಳಿವಳಿಕೆಯ ಪ್ರೇರಣೆಗಳೇ ಜನಪದ ಸಾಹಿತ್ಯದಲ್ಲಿಯೂ ಕೂಡ ಪ್ರಕಾರಗಳಾಗಿ ಭಾವಿಸಲು ಸಾಧ್ಯವಾಗಿದೆ.

ಆದರೆ ಇಂದು ಜನಪದ ಸಾಹಿತ್ಯದ ಪಠ್ಯ–ಪ್ರದರ್ಶನಗಳ ಕಲ್ಪನೆ ಬದಲಾಗಿದೆ. ನಿರೂಪಕ, ಕೇಳುಗ ವರ್ಗಗಳಾದ ಹೆಂಗಸರು, ಗಂಡಸರು ಮತ್ತು ಮಕ್ಕಳು, ಸ್ಥಳ, ಸಂದರ್ಭ, ಸನ್ನಿವೇಶ, ಭಾಷೆ, ವಿದ್ಯೆ, ಜಾತಿ

– ಮುಂತಾದ ಹತ್ತಾರು ಸಂಗತಿಗಳು ಸೇರಿಯೇ ಒಂದು ಅಖಂಡ ಪಠ್ಯವಾಗಿ ನಿರ್ಮಾಣಗೊಳ್ಳುತ್ತದೆ. ಒಂದು ಕಥಾನಕದ ವಸ್ತು ಹೀಗೆ ಕಾಲ ಮತ್ತು ದೇಶಗಳ ಇತರ ಸಂಗತಿಗಳಿಗನುಗುಣವಾಗಿ ವಕ್ತೃವಿನಿಂದ ಪುನರ್‌ರಚಿತ ಹೊಸಪಠ್ಯವಾಗುವ ಒಂದು ಪ್ರಕ್ರಿಯೆಯೇ ಇಲ್ಲಿನ ಜೀವಂತಿಕೆ ಆಗಿರುತ್ತದೆ. ಆದ್ದರಿಂದ ಅದು ಗದ್ಯ–ಪದ್ಯಗಳ ನಿಯತಿಯ ಹಂಗಿಲ್ಲದೆ ಸೃಷ್ಟಿಯಾಗುತ್ತಿರುತ್ತದೆ. ವಚನಕಾರ ಬಸವಣ್ಣ ಹೇಳುವ ಹಾಗೆ ತಾಳ–ಮಾನ, ಸರಿಸವನರಿಯದ, ಓಜೆ–ಬಜಾವಣೆಯ ಲೆಕ್ಕ ತಿಳಿಯದ, ದೇವಗಣ–ಬ್ರಹ್ಮಗಣಗಳ ಪ್ರಜ್ಞೆ ಇಲ್ಲದೆಯೂ ಕೇಡಿಲ್ಲವಾಗಿ 'ಹಾಡು'ವುದು ಕನ್ನಡದ ದೇಶೀ ಸಂಸ್ಕೃತಿಯ ಪ್ರಧಾನ ಗುಣಲಕ್ಷಣವಾಗಿದೆ. ಕುರಿತು ಓದದೆಯೂ ಕಾವ್ಯ ಪ್ರಯೋಗಿಸುವ ಪರಿಣತಮತಿಗಳ ಈ ದೇಶೀ ಮಟ್ಟುಗಳಿಗೆ 'ನಾವು' ಕೊಡುವ ಹೆಸರುಗಳು ಬೇರೆಬೇರೆಯಾದರೂ 'ಅವರ' ಉಸಿರು ಒಂದೇಯಾಗಿರುವುದನ್ನು ಇಲ್ಲಿ ನಾವು ಗಮನಿಸಬೇಕು. ಹೀಗಿದ್ದರೂ ಅಧ್ಯಯನದ ಅನುಕೂಲಕ್ಕೆ ಮತ್ತು ವಸ್ತು, ವಿನ್ಯಾಸ, ಅದರ ನಿರೂಪಣೆ ಹಾಗೂ ಪರಿಣಾಮದಲ್ಲಿ ಅದರ ತೀವ್ರತೆಯನ್ನು ಗುರುತಿಸಿ ಕಥನಗೀತೆಗಳ ಲಕ್ಷಣಗಳನ್ನು ತೌಲನಿಕವಾಗಿ ಗೀತೆ ಮತ್ತು ಲಾವಣಿಗಳ ಜೊತೆಗಿಟ್ಟು ಈ ಕೆಳಗಿನಂತೆ ಕಂಡುಕೊಳ್ಳಬಹುದು.

| "ಕಥನಗೀತೆ | ಗೀತೆ | ಲಾವಣಿ |
|---|---|---|
| ಹಾಡು | ಹಾಡು | ಹಾಡು |
| ಕಥನಪ್ರಧಾನ | ಅಲ್ಲ | ಅಲ್ಲ |
| ವರ್ಣನೆ | ಆಗಿರಬೇಕಿಲ್ಲ | ಅತಿವರ್ಣನೆ |
| ಸಾಂದರ್ಭಿಕ ಅನಿವಾರ್ಯತೆ | ಅಲ್ಲ | ಅಲ್ಲ |
| ನೈಸರ್ಗಿಕ ಒತ್ತಡ | ಅಲ್ಲ | ಅಭಿರುಚಿ |
| ವಿಷಯನಿಷ್ಠ | ಅಲ್ಲ | ವ್ಯಕ್ತಿನಿಷ್ಠ |
| ಜನಪದ ರೀತಿ | ಅಲ್ಲ | ಜನಪ್ರಿಯ ರೀತಿ |
| ಘಟನಾತ್ಮಕ | ಅಲ್ಲ | ಅಲ್ಲ |
| ಅತಾರ್ಕಿಕ | ಅಲ್ಲ | ತಾರ್ಕಿಕ |
| ಕ್ರಿಯಾಪ್ರಧಾನ | ವಸ್ತುಪ್ರಧಾನ | ಸಾಮಗ್ರಿ ಪ್ರಧಾನ |
| ಪಾತ್ರ ಪೋಷಿತ | ವಿಷಯ ಪೋಷಿತ | ಸಾಮಗ್ರಿ ಪ್ರಧಾನ |

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 3, 2021

| | | |
|---|---|---|
| ವಸ್ತು ವಿಶೇಷತೆ | ಸಾಮಾನ್ಯತೆ | ವಿಶೇಷತೆ |
| ರೂಪನಿಷ್ಠ | ಸಾಮಾನ್ಯತೆ | ಅಸ್ಪಷ್ಟ |
| ವಸ್ತು ಯೋಜಿತ | ವಸ್ತು ಅರ್ಪಿತ | ವಸ್ತು ನಿಯೋಜಿತ |
| ಪಾತ್ರ ಮಾದರಿ | ವಸ್ತು ಅರ್ಪಿತ | ಅಪೇಕ್ಷೆಗಳು"ᵕ |

ಹೀಗೆ ಒಂದು ನಿರ್ದಿಷ್ಟ ಐತಿಹಾಸಿಕ ಸಂದರ್ಭದಿಂದ ಹುಟ್ಟುವ ಕಥನಗೀತೆ ಇತರ ಕಾವ್ಯ ಪ್ರಕಾರಗಳಿಂದ ಭಿನ್ನವಾಗುವುದು ಅದರ ವಿಶಿಷ್ಟ ರಚನಾ ವಿನ್ಯಾಸದಿಂದ. "ಕಥನಗೀತೆ ಕಥೆಯಿಂದ ಆಗುವುದಾದರೂ ಪ್ರಮುಖವಾಗಿ ಕಥನಗೀತೆಯ ಮಾದರಿಯನ್ನು ಪರಿಭಾವಿಸುವವನು ಮೊದಲು ಅದರ ವಕ್ತೃ, ಅವನ ಸ್ವಪ್ರಜ್ಞೆ, ಕಥನಗೀತೆ, ಕಥನಪದ್ಧತಿ ಮತ್ತು ಕಥನ ಮಾದರಿಗಳು ಅಪ್ರಜ್ಞಾಪೂರ್ವಕವಾಗಿ ಕಲಿತ ಕಥೆಗಾರನ ಪ್ರಜ್ಞಾಪೂರ್ವಕ ಪುನರ್‌ಸೃಷ್ಟಿಗಳು. ಕಥನಗೀತೆ ಗೀತೆಯಿಂದ ಕಥೆಯಿಂದ ಮತ್ತಾವುದೇ ಜನಪದ ಮಾದರಿಯಿಂದ ಬೇರೆಯಾಗುವುದು ಈ ಮೂಲಕವೆ. ಕಥನಗೀತೆ ಜನಪದದ ಸಾಮೂಹಿಕ ಸ್ವತ್ತಾದರೂ ರಚನೆ ಮತ್ತು ನಿರ್ವಹಣೆಯಲ್ಲಿ ಪರಿಣತ ಜನಪದನೊಬ್ಬನ : ಕೆಲವರ ನಿರ್ವಹಣೆಯಾಗಿರುವುದು ಈ ಬಗೆಯ ಅವರ ಮಾದರಿ ಸಿದ್ಧಿಯಿಂದಲೆ. ಅದನ್ನು ಹೇಳುವ, ಕೇಳುವ ಮತ್ತು ಭಾಗವಹಿಸುವ ಸಂದರ್ಭ ಮತ್ತು ಪ್ರಕ್ರಿಯೆ ಸಾಂದರ್ಭಿಕವಾಗಿ ಪರಿಣಮಿಸುವುದು ಕೂಡ ಅದರ ಮಾದರಿ ನಿರ್ಮಿತಿಯಲ್ಲಿ ಇರುವ ಪರಿಮಿತಿಯಿಂದಲೆ. ಹೀಗಾಗಿ ಕಥನಗೀತೆ ಎಂಬುದು ಜನಪದ ಸಂಸ್ಕೃತಿಯ ಒಂದು ನಿರ್ದಿಷ್ಟ ಸಾಂಸ್ಕೃತಿಕ ಮಾದರಿ"ಯೆಂದು ಸರಿಯಾಗಿಯೆ ಗುರುತಿಸಲಾಗಿದೆ.

ಹೀಗೆ 'ನೆಲಸಿದ ಕಾವ್ಯಂ ಕಾವ್ಯಕೆ ಲಕ್ಷಣಂ' ಎಂಬಂತೆ ಪರಂಪರೆಯಲ್ಲಿ ಸಿದ್ಧಿಸಿದ ಮಾದರಿಯನ್ನು ಈ ಕಥನಗೀತೆಗಳ ರಚನೆ ಒಳಗೊಂಡಿದೆ. ಸಹಜ ಆಡುನುಡಿಯ ಸೌಂದರ್ಯದಲ್ಲಿ ಜನಪದ ಸಾಹಿತ್ಯ ಸಹಜ ಜೀವನಮೌಲ್ಯಗಳನ್ನು ಮತ್ತು ಅದರ ವಿರೂಪ–ಕುರೂಪಗಳನ್ನು ಪ್ರತಿಪಾದಿಸುತ್ತವೆ.

ಇಂತಹ ಕಥನಗೀತೆಗಳನ್ನು ಅಧ್ಯಯನದ ದೃಷ್ಟಿಯಿಂದ ಸ್ಥೂಲವಾಗಿ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಕಥನಗೀತೆಗಳೆಂದು ಇಲ್ಲಿ ವಿಭಾಗಿಸಿಕೊಳ್ಳಲಾಗಿದೆ. ಬದುಕಿನ ಹತ್ತಾರು ಆಯಾಮಗಳ ಸೂಕ್ಷ್ಮ ಅನುಭವವಿಶೇಷಗಳು ಎಲ್ಲ ಬಗೆಯ ಸಾಹಿತ್ಯ ರೂಪಗಳಲ್ಲಿ ತಳುಕುಹಾಕಿಕೊಂಡಿರುತ್ತವೆ. ಹೀಗೆ ಯಾವುದೇ ಸಾಹಿತ್ಯದ ರೂಪಗಳನ್ನು ವಸ್ತು–ವಿನ್ಯಾಸಗಳಿಂದ ಗೆರೆಕೊರೆದು ವರ್ಗೀಕರಿಸಿಕೊಳ್ಳುವುದು ಅಪೂರ್ಣ ಅಥವಾ ತೊಡಕಿನದೆ ಆಗುತ್ತದೆ. ಈ ಮಾತು ಕಥನಗೀತೆಗಳಿಗೂ ಅನ್ವಯಿಸುತ್ತದೆ.

Research Paper © 2012 IJFANS. All Rights Reserved

**ಕೊನೆಟಿಪ್ಪಣಿಗಳು**

೧. ರಾಮಚಂದ್ರೇಗೌಡ ಹಿ.ಶಿ. : ಜಾನಪದ : ಸಾಂಸ್ಕೃತಿಕ ಆಯಾಮಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೮, ಪುಟ ೧೬

೨. ಪರಮಶಿವಯ್ಯ ಜೀ.ಶಂ. : ಜನಪದ ಖಂಡಕಾವ್ಯ, ಚೇತನ ಬುಕ್‌ಹೌಸ್, ಮೈಸೂರು – ೨೦೦೨, ಪುಟ ೪

೩. ರಾಮಚಂದ್ರೇಗೌಡ ಹಿ.ಶಿ. : ಜಾನಪದ : ಸಾಂಸ್ಕೃತಿಕ ಆಯಾಮಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೮, ಪುಟ ೧೮

೪. ಹಂಪ ನಾಗರಾಜಯ್ಯ 'ಯಕ್ಷಯಕ್ಷಿಯರು' ಪುಟ ೯, ಚಂದ್ರಸಾಗರ ವರ್ಣಗ್ರಂಥಮಾಲೆ ಬೆಂಗಳೂರು.

ದೇವೇಂದ್ರಕುಮಾರಿ ಹಕಾರಿ : ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೮೫, ಪುಟ ೧೪೩.

೫. ರಾಮಚಂದ್ರೇಗೌಡ ಹಿ.ಶಿ. : ಜಾನಪದ : ಸಾಂಸ್ಕೃತಿಕ ಆಯಾಮಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೮, ಪುಟ ೧೮

೬. ಕಲಬುರ್ಗಿ ಎಂ.ಎಂ. ಜಾನಪದಮಾರ್ಗ, ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು – ೧೯೯೫, ಪುಟ ೮೨.

೭. ಜವರೇಗೌಡ ದೇ. : ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು – ೨೦೦೧, ಪುಟ ೧೩೪–೧೩೫

* ಡಾ. ಜೀಶಂಪ, ಡಾ. ಎಂ.ಎಂ. ಕಲಬುರ್ಗಿ, ಡಾ. ರಾಗೌ, ಕರಾಕೃ, ಡಾ. ಆರ್.ಸಿ. ಹಿರೇಮಠ್, ದೇವುಡು, ಸಿಂಪಿಲಿಂಗಣ್ಣ, ಡಾ.ಎಂ.ಎಸ್. ಸುಂಕಾಪುರ, ಡಾ. ಬಿ.ಎಸ್. ಗದ್ಗೀಮಠ್, ದೇ. ಜವರೇಗೌಡ ಮತ್ತು ಡಾ. ಹಿ.ಶಿ. ರಾಮಚಂದ್ರೇಗೌಡ, ಡಾ. ಅಂಬಳಿಕೆ ಹಿರಿಯಣ್ಣ, ಡಾ. ಶ್ರೀಕಂಠಕೂಡಿಗೆ, ಡಾ. ದೇವೇಂದ್ರ ಕುಮಾರ ಹಕಾರಿ ಮುಂತಾದವರು ಸುದೀರ್ಘವಾಗಿ ನಡೆಸಿದ ಚರ್ಚೆಗಳನ್ನು ಗಮನಿಸಲಾಗಿದೆ.

೮. ರಾಮಚಂದ್ರೇಗೌಡ ಹಿ.ಶಿ. : ಜಾನಪದ : ಸಾಂಸ್ಕೃತಿಕ ಆಯಾಮಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೮, ಪುಟ ೧೯–೨೦

೯. ರಾಮಚಂದ್ರೇಗೌಡ ಹಿ.ಶಿ. : ಜಾನಪದ : ಸಾಂಸ್ಕೃತಿಕ ಆಯಾಮಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೮, ಪುಟ ೧೮–೨೦